ನಂ: ನ್ಯಾಯಾಂಗ/ 170 /2004-05

ಜಿಲ್ಲಾಧಿಕಾರಿಗಳ ಕಛೇರಿ,
ಹಾಸನ ಜಿಲ್ಲೆ ಹಾಸನ.
ದಿನಾಂಕ: 23-6-2004.

## : ಸುತ್ತೋಲೆ :

ವಿಷಯ:- ಸಜಾ ಬಂದಿಗಳ ಪೆರೋಲ್ ರಜೆ ಕುರಿತು.

ಉಲ್ಲೇಖ:- ಕರ್ನಾಟಕ ಸರ್ಕಾರದ ಒಳಾಡಳಿತ ಇಲಾಖೆಯ ಪತ್ರ ನಂ:
ಹೆಚ್ ಡಿ 10/ಪಿಆರ್ಎ 99 ದಿನಾಂಕ: 20-2-2004.

***

ಕರಾಗೃಹದಲ್ಲಿರುವ ಸಜಾ ಬಂದಿಗಳು ಪೆರೋಲ್ ರಜೆಯ ಮೇಲೆ ಕೆಲವು ತುರ್ತು ಸಮಯಗಳಲ್ಲಿ ಹೋಗಿಬರಲು ಕರ್ನಾಟಕ ಪ್ರಿಸನ್ಸ್ ಕಾಯ್ದೆ 1963 ಹಾಗೂ ನಿಯಮ 1974ರಡಿ ಕೆಲವು ಷರತ್ತುಗಳಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಹಿಂದೆ ಇಂತಹ ಪೆರೋಲ್ ರಜೆಗಳನ್ನು ನೀಡುವ ಮುನ್ನಾ ಜಿಲ್ಲಾ ದಂಡಾಧಿಕಾರಿಗಳ ಅಭಿಪ್ರಾಯವನ್ನು ಕೋರುತ್ತಿದ್ದು ಅಭಿಪ್ರಾಯ ನೀಡುವ ಮುನ್ನಾ ಅರಕ್ಷಕ ಇಲಾಖೆಯವರು ಸ್ಪಷ್ಟ ಅಭಿಪ್ರಾಯ ಪಡೆದು ( ಆರಕ್ಷಕ ಅಧೀಕ್ಷಕರವರಿಂದ ) ಅವರ ಅಭಿಪ್ರಾಯದನ್ವಯ ಪೆರೋಲ್ ರಜೆಯ ಬಿಡುಗಡೆಗೆ ಶಿಫಾರಸ್ಸು ಮಾಡಲಾಗುತ್ತಿತ್ತು. ಈ ಪದ್ಧತಿಯನ್ನು ಉಲ್ಲೇಖಿತ ಸರ್ಕಾರದ ಪ್ರಕಟಣೆಯಲ್ಲಿ ಮಾರ್ಪಡಿಸಿ, ಕರ್ನಾಟಕ ಪ್ರಿಸನ್ಸ್ ( ತಿದ್ದುಪಡಿ) ನಿಯಮ 2000ನ್ನು ತಂದಿರುತ್ತದೆ. ಈ ತಿದ್ದು ಪಡಿ ನಿಯಮ 1, 2, 3, 4, 5, 6ರಲ್ಲಿ ಪೆರೋಲ್ ರಜೆಯ ಮನವಿಗಳ ಬಗ್ಗೆ ತೆಗೆದು ಕೊಳ್ಳಬೇಕಾದ ಕ್ರಮಗಳ ವಿವರಣೆ ಇರುತ್ತದೆ. ಈ ತಿದ್ದುಪಡಿ ನಿಯಮದನ್ವಯ ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರವರಿಂದ ಕೋರಿಕೆಯ ಮನವಿಗಳನ್ನು ಅರಕ್ಷಕ ಉಪ ನಿರೀಕ್ಷಕರವರು ತನಿಖೆ ನಡೆಸಿ ಅವರ ಸ್ಪಷ್ಟ ಅಭಿಪ್ರಾಯವನ್ನು ಸಂಬಂಧಿಸಿದ ತಾಲ್ಲೂಕು ಕಾರ್ಯಪಾಲಕ ದಂಡಾಧಿಕಾರಿಗಳಿಗೆ ಮಂಡಿಸಬೇಕು ನಂತರ ತಾಲ್ಲೂಕು ಕಾರ್ಯಪಾಲಕ ದಂಡಾಧಿಕಾರಿಗಳು, ಅವರ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟ ಕಾರಾಗೃಹದ ಅಧೀಕ್ಷಕರವರಿಗೆ ವರದಿ ಮಾಡಬೇಕಾಗಿರುತ್ತದೆ. ಈ ಪ್ರಕ್ರಿಯೆಗೆ 15 ದಿನಗಳ ಕಾಲಾವಕಾಶಗಳನ್ನು ನೀಡಲಾಗಿರುತ್ತದೆ.

ಮೈಸೂರು ಕೇಂದ್ರ ಕಾರಾಗೃಹದ ಅಧೀಕ್ಷಕರವರು ಅವರ ಪತ್ರ ಸಂಖ್ಯೆ: ಕೆಕಾಮೈ: ಜಿ3: ಪೆರೋಲ್ 535/2003-04 ದಿನಾಂಕ: 15-3-2004ರಲ್ಲಿ ಆರಕ್ಷಕ ಅಧೀಕ್ಷಕರು ಹಾಸನ ಜಿಲ್ಲೆ ಹಾಸನರವರಿಗೆ ಸಜಾ ಬಂದಿ ಸಂಖ್ಯೆ: 10478 ಪುಟ್ಟರಾಜು ಬಿನ್ ಲೇ. ವೆಂಕಟ ಕೃಷ್ಣಯ್ಯರವರ 30 ದಿನಗಳ ಪೆರೋಲ್ ರಜೆಯ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು ಆರಕ್ಷಕ ಅಧೀಕ್ಷಕರು ಹಾಸನ ರವರು ಅರಕಲಗೂಡು ಆರಕ್ಷಕ ಉಪ ನಿರೀಕ್ಷಕರವರಿಗೆ ವರದಿಗಾಗಿ ಕಳುಹಿಸಿದ್ದು, ಇವರು ಅರಕಲಗೂಡು ಆರಕ್ಷಕ ನಿರೀಕ್ಷಕರು ಹಾಗೂ ಹೊಳೆನರಸೀಪುರ ಉಪ ಆರಕ್ಷಕರ ಮುಖೇನ ಅರಕಲಗೂಡು ತಾಲ್ಲೂಕು ದಂಡಾಧಿಕಾರಿಗಳವರಿಗೆ ವರದಿ ಮಂಡಿಸಿರುತ್ತಾರೆ. ಆರಕ್ಷಕ ಉಪ ನಿರೀಕ್ಷಕರು ಅರಕಲಗೂಡು ರವರು ಖೈದಿಯ ಕುಟುಂಬದವರ ಹೇಳಿಕೆ ಹಾಗೂ ಗ್ರಾಮಸ್ಥರುಗಳ ಹೇಳಿಕೆ ಪಡೆದು ಅವರ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿ ವರದಿಸಿದ್ದು, ಅರಕಲಗೂಡು ಆರಕ್ಷಕ ನಿರೀಕ್ಷಕರವರು ಹಾಗೂ ಹೊಳೆನರಸೀಪುರ ಉಪ ಆರಕ್ಷಕ ಅಧೀಕ್ಷಕರವರು ವರದಿಯನ್ನು ಪರಿಶೀಲಿಸಿ ತಿದ್ದು ಪಡಿ ಮಾಡದೆ ಅವರು ಸಹ ಮೇಲು ರುಜು ಮಾಡಿ ವರದಿ ಮಾಡಿರುತ್ತಾರೆ. ಈ ವರದಿಯಲ್ಲಿ ಸದರಿ ಖೈದಿಯನ್ನು ಪೆರೋಲ್ ರಜೆಯ ಮೇಲೆ ಬಿಡುಗಡೆ ಮಾಡಬಹುದೆ? ಬೇಡವೆ? ಎಂಬ ಸಕಾರಣಗಳೊಂದಿಗೆ ವರದಿ ಮಾಡಿರುವುದಿಲ್ಲಾ. ಇದರಿಂದಾಗಿ ಈ ಪೆರೋಲ್ ರಜೆಯ ಬಗ್ಗೆ ಯಾವ ಕ್ರಮ

MAG. 52/04-05

ಕೈಗೊಳ್ಳಬೇಕೆಂಬ ಜಿಜ್ಞಾಸೆ ಉಂಟಾಗಿರುತ್ತದೆ. ಈ ರೀತಿಯ ವರದಿ ಯಿಂದ ಉದ್ದೇಶಿತ ಪ್ರಕ್ರಿಯೆ ಈಡೇರದಂತಾಗಿ ವಿನಾಃ ಕಾರಣ ವಿಳಂಬಕ್ಕೆ ಅವಕಾಶವಾಗುತ್ತದೆ. ಈ ಪ್ರಕರಣದಲ್ಲಿ ಸುಮಾರು 2 ತಿಂಗಳು 20 ದಿನಗಳ ಕಾಲವ್ಯಯವಾಗಿರುತ್ತದೆ. ಅರಕಲಗೂಡು ತಾಲ್ಲೂಕು ದಂಡಾಧಿಕಾರಿಯವರು ಈ ಕಛೇರಿಗೆ ಅಭಿಪ್ರಾಯಕ್ಕಾಗಿ ಮಂಡಿಸಿರುತ್ತಾರೆ.

ಮೇಲ್ಕಂಡ ವಿದ್ಯಮಾನದಿಂದ ಮೇಲ್ಕಂಡ ನಾಲ್ಕು ಅಧಿಕಾರಿಗಳು ಸರ್ಕಾರದ ಉಲ್ಲೇಖಿತ ಪ್ರಕಟಣೆಯನ್ನು ಪರಿಶೀಲಿಸಿ ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸದೆ ಇರುವುದುಕಂಡು ಬರುತ್ತದೆ. ಇನ್ನು ಮುಂದೆ ಇಂತಹ ಪೆರೋಲ್ ರಜೆಯ ಅರ್ಜಿಗಳ ಬಗ್ಗೆ ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸಿ ಸಂಬಂಧಿಸಿದ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರು ನೇರವಾಗಿ ಅವರ ಸ್ಪಷ್ಟ ಅಭಿಪ್ರಾಯದೊಂದಿಗೆ ಸಂಬಂಧಿಸಿದ ತಾಲ್ಲೂಕು ದಂಡಾಧಿಕಾರಿಗಳವರಿಗೆ ವರದಿ ಮಾಡಲು ಸೂಚಿಸಿದೆ. ಅಲ್ಲದೆ ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರವರು ನೇರವಾಗಿ ಸಂಬಂಧಿಸಿದ ಠಾಣೆಯ ಆರಕ್ಷಕ ಉಪನಿರೀಕ್ಷಕರವರಿಗೆ ವರದಿಗಾಗಿ ಕಳುಹಿಸಲು ಸಹ ಕೋರಲಾಗಿದೆ.

23

ಅಪರ ಜಿಲ್ಲಾ ದಂಡಾಧಿಕಾರಿ,
ಹಾಸನ ಜಿಲ್ಲೆ ಹಾಸನ.

ಸರ್ಕಾರದ ಪ್ರಕಟಣೆಯ ಪ್ರತಿಯೊಂದಿಗೆ :-

1. ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ ಹಾಸನ ರವರಿಗೆ ಮಾಹಿತಿಗಾಗಿ ಹಾಗೂ ತಮ್ಮ ಅಧೀನ ಕಛೇರಿಯವರಿಗೆ ಸ್ಪಷ್ಟ ನಿರ್ದೇಶನಕ್ಕಾಗಿ.
2. ಆರಕ್ಷಕ ಅಧೀಕ್ಷಕರು ಹಾಸನ/ ಅರಸೀಕೆರೆ/ ಹೊಳೆನರಸೀಪುರ ರವರಿಗೆ ಮಾಹಿತಿಗಾಗಿ ಹಾಗೂ ಅದೀನ ಕಛೇರಿಗಳಿಗೆ ಸ್ಪಷ್ಟ ನಿರ್ದೇಶನಕ್ಕಾಗಿ.
3. ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ಉಪ ವಿಭಾಗದ ದಂಡಾಧಿಕಾರಿಯವರಿಗೆ ಮಾಹಿತಿಗಾಗಿ.
4. ಆರಕ್ಷಕ ಉಪ ನಿರೀಕ್ಷಕರು ಅರಕಲಗೂಡು ಠಾಣೆ ರವರಿಗೆ ಸಂಬಂಧಿಸಿದ ಪೆರೋಲ್ ರಜೆಯ ಕಡತದೊಂದಿಗೆ ಸ್ಪಷ್ಟ ಅಭಿಪ್ರಾಯಕ್ಕಾಗಿ.
5. ಕೇಂದ್ರ ಕಾರಾಗೃಹ ಅಧೀಕ್ಷಕರು. ಬೆಂಗಳೂರು./ ಮೈಸೂರು/ ಗುಲ್ಬರ್ಗ/ ವಿಜಾಪುರ/ ಬಳ್ಳಾರಿ/ ಬೆಳಗಾಂ/ ಧಾರವಾಡರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

MAG